ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರ ಹದಿಮೂರು ಹಾಗೂ ನೂರ ಹದಿನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ: ರಾಜ್ಯದಾದ್ಯಂತ "ಚಿಕೂನ್ ಗುನ್ಯಾ" ರೋಗ ಹರಡುತ್ತಿರುವ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ನಾಮ ಪ್ರಸ್ತಾಪ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಯವರು ಮೇಲ್ಮನವಿಯಲ್ಲಿ ಇದ್ದಾರೋ, ಏನೋ ಗೊತ್ತಿಲ್ಲ. ಈಗ ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ. ಈ ಚಿಕೂನ್ ಗುನ್ಯಾ ರೋಗದ ಬಗ್ಗೆ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತಿಲ್ಲ. ಇಲ್ಲಿ ಏನೋ ಉದ್ದೇಶಪೂರ್ವಕವಾಗಿ ಸರ್ಕರಕ್ಕೆ ಮುಜುಗರ ಮಾಡುವಂಥ ಅಭಿಪ್ರಾಯ ನಮಗೆ ಇಲ್ಲ. ನಾನು ಮೊನ್ನೆ ದಿವಸ ಟಿ.ವಿ.ಯಲ್ಲಿ ನೋಡುವಾಗ ಶಿವಮೊಗ್ಗ ಜಿಲ್ಲೆಯಲ್ಲೂ ಕೂಡ ಸುಮಾರು 52 ಸಾವಿರಕ್ಕಿಂತಲೂ ಹೆಚ್ಚು ರೋಗಿಗಳು ಇದ್ದಾರೆಂಬ ವರ್ತಮಾನ ಇದೆ. ತಮ್ಮ ಕ್ಷೇತ್ರವಾದ ಶಿಕಾರಿಪುರದಲ್ಲಿ ಈ ರೋಗ ಇದೆ. ಈಗ ಈ ರೋಗ ಎಲ್ಲಾ ಕಡೆಗಳಲ್ಲೂ ಹರಡುತ್ತಿದೆ. ನಿನ್ನೆ ದಿವಸ ಡಾ: ರುದ್ರಯ್ಯ ಎನ್ನುವವರ ತಂಡ ಬಂದು, ಸರ್ಕಾರ ಈ ರೋಗವನ್ನು ತಡೆ ಹಿಡಿಯುವಂಥ ಕೆಲಸವನ್ನು ಮಾಡುತ್ತಿಲ್ಲ. ಇದಕ್ಕೆ ಏನು ಮಾಡಿದರೆ ಹೋಗುತ್ತದೆನ್ನುವ ಬಗ್ಗೆ, ಇದಕ್ಕೆ ಸ್ಪ್ರೇ ಮಾಡಿದರೆ, ಹೋಗುತ್ತದೆಂಬ, ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಅಶೋಕ್‌ರವರು ಪ್ರಸ್ತಾಪ ಮಾಡಿದಂತೆ, ಅವರೂ ಕೂಡ ಆ ಭಾಗಕ್ಕೆ ಹೋಗಿ ಬಂದಿದ್ದಾರೆ. ನಾನೂ ಕೂಡ ನನ್ನ ಮತಕ್ಷೇತ್ರದಲ್ಲಿ ಹೋದಾಗ ಸಂಬಂಧಪಟಟ ಉನ್ನತ ಮಟ್ಟದ ಅಧಿಕಾರಿಗಳು ಬಂದಿದ್ದರು. ಈಗ ಸರ್ಕಾರ ಇದರ ಬಗ್ಗೆ ಏನೂ ವಿಚಾರ ಮಾಡಿಲ್ಲವೆಂಬ ಆಪಾದನೆಯನ್ನು ನಾನು ಮಾಡುತ್ತಾ ಇಲ್ಲ. ಇದು ದಿನೇ ದಿನೇ ಬೆಳೆಯುತ್ತಾ ಇದೆ. ನಾವು ಇದನ್ನು ರಾಜಕೀಯವಾಗಿ ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲವೆಂಬ ಮಾತನ್ನು ನಾನು ಮೊದಲೇ ಪೇಳಿದ್ದೇನೆ. ಇವತ್ತು ತಾವು ಕೇವಲ 14 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇದು ಯಾವುದಕ್ಕೂ ಆಗುವುದಿಲ್ಲ. ಮೊದಲೇ ಉತ್ತರ ಕರ್ನಾಟಕದಿಂದ ಪ್ರಾರಂಭವಾದ ಈ ರೋಗ, ಬೆಂಗಳೂರು ನಗರದಲ್ಲೂ ಕೂಡ ಇದು ದಿನೇ ದಿನೇ ಹಬ್ಬುತ್ತಿದೆ. ಇದು ಒಂದು ವಿಚಿತ್ರವಾದಂಥ ರೋಗವಾಗಿದೆ, ಒಂದೊಂದು ಮನೆಯಲ್ಲಿ 5–6 ಜನರು ಬಳಲುತ್ತಿದ್ದಾರೆ. This is the fact. - - ಇದನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಎಲ್ಲಾ ಕಡೆಯಲ್ಲೂ ಕೆಲಸ ಮಾಡುತ್ತಿರುವ skilled technicians ಇದ್ದಾರೆ. ಪ್ರತಿಯೊಂದು ಆಸ್ಪತ್ರೆಯಲ್ಲಿ ಡಾಕ್ಟರುಗಳಿಗೆ ನಾನು ಈ ಮೊದಲು ಸಹ ಹೇಳಿದ್ದೇನೆ, you